

ಮಾಲ್ಕಿನ್ ಈ ಮನೆಗೆ' ಅಂದದ್ದಲ್ಲದೇ ಖಾಲಿ ಮಗ್ ನ್ನು ಎರಡೂ ಅಂಗೈಯ ಮಧ್ಯ ಹಿಡಿದು 'ನೀಡು ತಾಯೇ' ಪೋಸಿನಲ್ಲಿ ನಿಂತಾಗ ಉರಿದು ಹೋಯ್ತುವಳಿಗೆ. 'ಓ ನೀ ರಾಜೀನಾಮೆ ಕೊಟ್ರೇ ಅಂತ ನನ್ನ ನೌಕರಿಗೆ ಕಿಮ್ಮತ್ತು ಬಂತಲ್ಲಾ? ಭಪ್ಪರೆ ಗಂಡಸೇ!' ಅಂತ ಮನದಲ್ಲೇ ಗೊಣಗಿಕೊಂಡಳು. ಅದರೊಟ್ಟಿಗೇನೇ 'ಒಂದು ಬೆಡ್ ರೂಮ್ ಮನೆಗೆ ಶಿಫ್ಟ್ ಮಾಡ್ಕೋಬೇಕೇನೋ, ನನ್ನ ಇಪ್ಪತ್ತು ಸಾವಿರದ ಪಗಾರದಲ್ಲಿ ಈ ಮೂರು ಬೆಡ್ ರೂಮಿನ ಬಿಳಿಯಾನೆಯ ಮೆಂಟೇನನ್ಸ್, ಕರೆಂಟ್ ಬಿಲ್ ತುಂಬಲು ಸಾಧ್ಯವೇ ಇಲ್ಲ' ಅಂತಲೂ ಯೋಚಿಸುತ್ತಿದ್ದಳು. ಕಡೆಗೆ 'ಅವ್ವನ ಕಡೆಗೆ ಹೋದರೆ ಹೆಂಗೆ? ಪಾಪ ಅವಳಿಗೂ ಜೋಡಿ ಆಗ್ತದ' ಅಂತ ವಿಚಾರ ಬಂದೊಡನೆ ನಿರಾಳವಾಗಿ ತಾಯಿಯ ಮೇಲೆ ಪ್ರೀತಿಯುಕ್ಕಿತು.